

بِسۡمِ اللّٰهِ الرَّحۡمٰنِ الرَّحِيۡمِ

# ಸಹಾಬರ ಶ್ರೇಷ್ಠತೆ

(ಅಹ್ಮದಿಯಾ ಮುಸ್ಲಿಮ್ ಜಮಾಅತ್‌ನ ಐದನೇ ಖಲೀಫ, **ಹಝ್ರತ್ ಮಿರ್ಝಾ ಮಸ್‌ರೂರ್ ಅಹ್ಮದ್**, ಅವರು ಲಂಡನಿನ **'ಬೈತುಲ್ ಫುತೂಹ್'** ಮಸೀದಿಯಲ್ಲಿ **17–08–2018** ರಂದು ನೀಡಿದ **ಜುಮುಅ ಖುತ್‌ಬದ ಸಾರಾಂಶ**)

*(ತಶಹ್ಹುದ್, ತಅವ್ವುಧ್ ಮತ್ತು ಸೂರತುಲ್ ಫಾತಿಹ ಪಠಿಸಿದ ನಂತರ) ಹಝ್ರತ್ ಖಲೀಫತುಲ್ ಮಸೀಹ್ ಖಾಮಿಸ್ ಅಯ್ಯದಹುಲ್ಲಾಹು ತಆಲಾ ಬಿನಸ್ರಿಹಿಲ್ ಅಝೀಝ್ ಹೀಗೆ ಹೇಳಿದರು:*

ಈ ದಿನ ಸಹ ನಾನು ಕೆಲವು ಬದರಿ ಸಹಾಬರ ಬಗ್ಗೆ ವಿವರಿಸುವೆನು. ನಾನು ಮೊದಲು ಹಝ್ರತ್ ಆಮಿರ್ ಬಿನ್ ರಬೀಅರ ಬಗ್ಗೆ ಪ್ರಸ್ತಾಪಿಸುವೆನು. ಅವರ ಕುಟುಂಬದವರು ಹಝ್ರತ್ ಉಮರ್(ರ)ರವರ ಪಿತ ಖತ್ತಾಬ್‌ರೊಂದಿಗೆ ಪ್ರತಿಜ್ಞಾಬದ್ಧ ಸಂಬಂಧ ಹೊಂದಿದ್ದರು. ಈ ಕಾರಣದಿಂದ ಹಝ್ರತ್ ಆಮಿರ್ ಮತ್ತು ಹಝ್ರತ್ ಉಮರ್(ರ) ಮಧ್ಯೆ ಅವರ ಕೊನೆಗಾಲದ ತನಕ ಸ್ನೇಹ ಸಂಬಂಧವಿತ್ತು. ಅವರು ಆರಂಭ ಕಾಲದಲ್ಲಿಯೇ ಮುಸ್ಲಿಮರಾಗಿದ್ದರು. ಅವರು ನಂಬುವಾಗ ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ದಾರ್ ಅರ್‌ಖಮ್‌ನಲ್ಲಿ ಆಶ್ರಯ ಪಡೆದಿರಲಿಲ್ಲ. ಹಝ್ರತ್ ಆಮಿರ್ ತನ್ನ ಪತ್ನಿ ಲೈಲಾ ಬಿನ್ತ್ ಹಶ್ಮರೊಂದಿಗೆ ಅಬಿಸೀನಿಯಾ ದೇಶಕ್ಕೆ ಹಿಜ್‌ರತ್ ಹೋಗಿ ಅನಂತರ ಮಕ್ಕಕ್ಕೆ ಮರಳಿ ಕಡೆಗೆ ಮದೀನಕ್ಕೆ ಹಿಜ್‌ರತ್ ಮಾಡಿದರು. ಹಝ್ರತ್ ಆಮಿರ್ ಬಿನ್ ರಬೀಅರ ಪತ್ನಿ ಮದೀನಕ್ಕೆ ಹಿಜ್‌ರತ್ ಮಾಡಿದ ಮಹಿಳೆಯರಲ್ಲಿ ಪ್ರಥಮರಾಗಿದ್ದರು. ಹಝ್ರತ್ ಆಮಿರ್ ಬದರ್ ಮತ್ತು ಇತರ ಎಲ್ಲ ಯುದ್ಧಗಳಲ್ಲಿ ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಜೊತೆಗಿದ್ದರು. ಅವರು ಹಿಜರಿ 32ರಲ್ಲಿ ನಿಧನ ಹೊಂದಿದರು. ಅವರು ಅನಸ್ ಗೋತ್ರಕ್ಕೆ ಸೇರಿದವರಾಗಿದ್ದರು.

ಹಝ್ರತ್ ಆಮಿರ್ ಹೇಳಿದರು, ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಹೀಗೆ ಹೇಳಿದ್ದಾರೆ: ನಿಮ್ಮ ಪೈಕಿ ಒಬ್ಬನು ಜನಾಝವನ್ನು ಕಂಡಾಗ ಅದರ ಜೊತೆ ಹೋಗಲು ಇಚ್ಛಿಸುವುದಿಲ್ಲವಾದರೆ ಎದ್ದು ನಿಂತುಕೊಳ್ಳಬೇಕು. ಆ ಜನಾಝ ಅವನನ್ನು ದಾಟಿ ಹೋಗುವ ತನಕ ಅಥವಾ ಜನಾಝ ಕೆಳಗಿರಿಸಲ್ಪಡುವ ತನಕ. ಅಬ್ದುಲ್ಲಾ ಬಿನ್ ಆಮಿರ್ ತನ್ನ ಪಿತ ಹಝ್ರತ್ ಆಮಿರ್‌ರಿಂದ ವರದಿ ಮಾಡುತ್ತಾರೆ: ಅವರು ಒಂದು ದಿನ ರಾತ್ರಿ ನಮಾಝ್ ಅನುಷ್ಠಿಸಲು ಎದ್ದು ನಿಂತರು. ಅದು ಹಝ್ರತ್ ಉಸ್ಮಾನ್(ರ)ರವರ ಬಗ್ಗೆ ಜನರು ಭಿನ್ನಾಭಿಪ್ರಾಯ ಹೊಂದಿದ ಕಾಲವಾಗಿತ್ತು. ಆಗ ಕಲಹ ಆರಂಭವಾಗಿತ್ತು. ಆಗ ಜನರು ಹಝ್ರತ್ ಉಸ್ಮಾನ್(ರ) ವಿರುದ್ಧ ಪ್ರತಿಭಟಿಸುತ್ತಿದ್ದರು. ಹಝ್ರತ್ ಆಮಿರ್ ರಾತ್ರಿ ನಮಾಝ್ ನಿರ್ವಹಿಸಿದ ನಂತರ ನಿದ್ರಿಸಿದಾಗ ಅವರಿಗೆ ಒಂದು ಸ್ವಪ್ನ ಕಾಣಿಸಿತು. ಅವರೊಂದಿಗೆ ಹೀಗೆ ಹೇಳಲಾಯಿತು. ಎದ್ದು ಅಲ್ಲಾಹನೊಂದಿಗೆ ಪ್ರಾರ್ಥಿಸು – ನಿನ್ನನ್ನು ಈ ಕಲಹದಿಂದ ರಕ್ಷಿಸಲಿಕ್ಕೋಸ್ಕರ. ಅಲ್ಲಾಹನು ತನ್ನ ಒಳ್ಳೆಯವರಾದ ದಾಸರನ್ನು ಅವರು ಪ್ರಾರ್ಥನೆ ಮಾಡಿದಾಗ ರಕ್ಷಿಸಿದ್ದಾನೆ. ಆಗ ಹಝ್ರತ್ ಆಮಿರ್ ನಮಾಝ್ ನಿರ್ವಹಿಸಿ ಪ್ರಾರ್ಥಿಸಿದರು. ಅನಂತರ ಅವರು ರೋಗ ಬಾಧಿತರಾದರು. ಆ ದಿನದಿಂದ ಅವರು ನಿಧನರಾಗುವ ತನಕ ಮನೆಯಿಂದ ಎಂದೂ ಹೊರಗೆ ಹೋಗಲಿಲ್ಲ. ಅವರ ಜನಾಝ ಮಾತ್ರ ಮನೆಯಿಂದ ಹೊರಟಿತು. ಅವರು ಕಲಹದಿಂದ ರಕ್ಷಣೆ ಪಡೆಯುವುದಕ್ಕೆ ಅಲ್ಲಾಹನು ಈ ರೀತಿ ಮಾಡಿದನು.

ಒಬ್ಬ ವ್ಯಕ್ತಿ ಹಝ್ರತ್ ಆಮಿರ್‌ರೊಂದಿಗೆ ಹೀಗೆ ಹೇಳಿದರು, ನಾನು ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರಿಂದ ಕಣಿವೆ ಪ್ರದೇಶದಲ್ಲಿ ಒಂದು ಸ್ಥಳವನ್ನು ನನಗೆ ನೀಡಲು ಬೇಡಿಕೊಂಡೆನು. ಆ ಸ್ಥಳ ಅರಬ್ ದೇಶದಲ್ಲಿ ಅತ್ಯುತ್ತಮವಾದುದಾಗಿದೆ. ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಆ ಸ್ಥಳ ನನಗೆ ನೀಡಿದರು. ನಾನು ಈ ಸ್ಥಳದ ಒಂದು ಭಾಗ ತಮಗೆ ನೀಡಲು ಇಚ್ಛಿಸುತ್ತೇನೆ. ಅದು ನೀವು ಜೀವಿಸಿರುವಾಗ ನಿಮ್ಮದು ಮತ್ತು ನೀವು ಮೃತರಾದ ನಂತರ ನಿಮ್ಮ ಮಕ್ಕಳಿಗೆ ಸೇರುವುದು. ಆಗ ಹಝ್ರತ್ ಆಮಿರ್ ಹೇಳಿದರು: ನಿಮ್ಮ ಭೂಮಿಯ ತುಂಡು ನನಗೆ ಬೇಡ. ಏಕೆಂದರೆ ಈ ದಿನ ಪವಿತ್ರ ಖುರ್‌ಆನ್‌ನ ಎಂತಹ ಒಂದು ಸೂರತ್ ಅವತೀರ್ಣವಾಗಿದೆ ಎಂದರೆ ಅದು ನಮ್ಮನ್ನು ಲೋಕವನ್ನೇ ವಿಸ್ಮರಿಸುವಂತೆ ಮಾಡಿದೆ. ಆ ಸೂರತ್ತಿನ ವಚನ ಹೀಗಿದೆ:

اِقۡتَرَبَ لِلنَّاسِ حِسَابُهُمۡ وَهُمۡ فِىۡ غَفۡلَةٍ مُّعۡرِضُوۡنَ

**ಇಖ್‌ತರಬಲಿನ್ನಾಸಿ ಹಿಸಾಬುಹುಮ್ ವಹುಮ್ ಫೀ ಗಫ್‌ಲತಿನ್ ಮುಅ್‌ರಿಝೂನ್.** ಮನುಷ್ಯರಿಗೆ ಅವರ ಲೆಕ್ಕಾಚಾರದ ಸಮಯ ಸಮೀಪಿಸಿದೆ. ಆದರೆ ಅವರು ನಿರ್ಲಕ್ಷ್ಯದಿಂದ ಮುಖ ತಿರುಗಿಸಿ ಹೋಗುತ್ತಿದ್ದಾರೆ. (21:2). ಪ್ರಕಾಶಿಸುತ್ತಿರುವ ನಕ್ಷತ್ರಗಳಾದ ಆ ಸಹಾಬರ ದೇವಭಯದ ಸ್ಥಿತಿ ಆ ರೀತಿ ಇತ್ತು. ಆ ಜನರೇ ವಾಸ್ತವಿಕವಾಗಿ ಧರ್ಮಕ್ಕೆ ಲೌಕಿಕ ಕಾರ್ಯಗಳ ಮೇಲೆ ಆದ್ಯತೆ ನೀಡುವವರಾಗಿದ್ದರು.

ಹಝ್ರತ್ ಆಮಿರ್ ಬಿನ್ ರಬೀಅ ವರದಿ ಮಾಡುತ್ತಾರೆ: ಝೈದ್ ಬಿನ್ ಅಮರ್ ಹೇಳಿದರು: ಹಝ್ರತ್ ಇಸ್ಮಾಈಲ್ ಅಲೈಹಿಸ್ಸಲಾಮರ ಸಂತಾನಕ್ಕೆ ಸೇರಿದ ಒಬ್ಬರು ನಬಿಯಾಗಿ ಆಗಮಿಸುವರೆಂದೂ ಅವರ ಹೆಸರು ಅಹ್ಮದ್ ಎಂದೂ ನಾನು ಪ್ರತೀಕ್ಷಿಸುತ್ತಿದ್ದೆ. ಆದರೆ ನನಗೆ ಅವರು ಕಾಣಲು ಸಿಗಲಾರರು ಎಂದು ನನಗೆ ತೋರುತ್ತದೆ. ನಾನು ಅವರನ್ನು ನಂಬುತ್ತೇನೆ. ನಾನು ಅವರು ಸತ್ಯವಂತರೆಂದೂ ನಬಿ ಎಂದೂ ಸಾಕ್ಷ್ಯ ಹೇಳುತ್ತೇನೆ. ನಿನಗೆ ಅವರನ್ನು ಕಾಣುವ ಭಾಗ್ಯ ಲಭಿಸಿದರೆ ಅವರಿಗೆ ನನ್ನ ಸಲಾಂ ತಲಪಿಸು. ನಾನು ಅವರ ಚಿಹ್ನೆಗಳನ್ನು ಹೇಳುವೆನು. ಆ ಮೂಲಕ ಅವರನ್ನು ನಿನಗೆ ಗುರುತಿಸಲು ಸಾಧ್ಯವಾಗುವುದು. ಅವರು ಎತ್ತರದ ಅಥವಾ ಗಿಡ್ಡ ದೇಹ ಹೊಂದಿರಲಾರರು. ಅವರ ತಲೆಗೂದಲು ಬಹಳ ನಿಬಿಡವಾಗಿರಲಾರದು. ತಲೆಗೂದಲು ಕಡಿಮೆಯೂ ಆಗಿರದು. ಅವರ ಕಣ್ಣು ಯಾವಾಗಲೂ ಕೆಂಪಾಗಿರುವುದು ಅವರ ಭುಜಗಳ ಮಧ್ಯೆ

ನುಬುವ್ವತ್ ಮುದ್ರೆ ಇರುವುದು. ಅವರ ಹೆಸರು ಅಹ್ಮದ್ ಎಂದಾಗಿರುವುದು. ಅವರು ಮಕ್ಕದಲ್ಲಿ ಜನಿಸುವರು. ಅವರು ಬೈಅತ್ ಪಡೆಯುವ ಸ್ಥಳ ಸಹ ಮಕ್ಕವಾಗಿರುವುದು. ಅವರ ಸಮುದಾಯದ ಜನರು ಅವರನ್ನು ಇಲ್ಲಿಂದ ಹೊರಗೆ ಹಾಕುವರು. ಅವರ ಸಮುದಾಯ ಅವರ ಸಂದೇಶವನ್ನು ಇಷ್ಟಪಡಲಾರರು. ಅನಂತರ ಅವರು ಯಸ್‌ರಿಬ್‌ಗೆ ಹಿಜ್‌ರತ್ ಹೋಗುವರು.

ಹಝ್ರತ್ ಆಮಿರ್ ಹೇಳುತ್ತಾರೆ: ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಪ್ರವಾದಿಯಾಗಿ ನಿಯೋಜಿಸಲ್ಪಟ್ಟಾಗ ನಾನು ಝೈದರ ಬಗ್ಗೆ ಅವರಿಗೆ ತಿಳಿಸಿದೆ. ಆಗ ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಹೇಳಿದರು: ನಾನು ಅವರನ್ನು ಸ್ವರ್ಗದಲ್ಲಿ ನೋಡಿದ್ದೇನೆ. ಅವರು ತನ್ನ ನಿಲುವಂಗಿಯನ್ನು ಹಿಡಿದೆಳೆಯುತ್ತಿದ್ದರು.

ನಾನು ಸ್ಮರಿಸಲು ಬಯಸುವ ಇನ್ನೊಬ್ಬ ಸಹಾಬಿ ಹಝ್ರತ್ ಹರಾಮ್ ಬಿನ್ ಮಿಲ್‌ಹಾನ್. ಅವರು ಅನ್‌ಸಾರ್‌ಗಳ ಬನೂ ಅದೀ ಬಿನ್ ನಜ್ಜಾರ್ ಗೋತ್ರದವರಾಗಿದ್ದರು. ಅವರ ಪಿತ ಮಿಲ್‌ಹಾನರ ಇನ್ನೊಂದು ಹೆಸರು ಮಾಲಿಕ್ ಬಿನ್ ಖಾಲಿದ್ ಎಂದಾಗಿತ್ತು. ಅವರ ತಾಯಿಯ ಹೆಸರು ಮುಲೈಕ ಬಿನ್ತ್ ಮಾಲಿಕ್. ಅವರ ಒಬ್ಬ ಸಹೋದರಿ ಹಝ್ರತ್ ಉಮ್ಮು ಸುಲೈಮ್, ಹಝ್ರತ್ ಅಬೂ ತಲ್‌ಹ ಅನ್‌ಸಾರಿಯ ಪತ್ನಿಯೂ ಹಝ್ರತ್ ಅನಸ್ ಬಿನ್ ಮಾಲಿಕರ ತಾಯಿಯೂ ಆಗಿದ್ದರು. ಅವರ ದ್ವಿತೀಯ ಸಹೋದರಿ ಹಝ್ರತ್ ಉಮ್ಮು ಹರಾಮ್, ಹಝ್ರತ್ ಉಬಾದ ಬಿನ್ ಸಾಮಿತರ ಪತ್ನಿ ಆಗಿದ್ದರು. ಹಝ್ರತ್ ಹರಾಮ್ ಬಿನ್ ಮಿಲ್‌ಹಾನ್ ಹಝ್ರತ್ ಅನಸ್‌ರವರ ಸೋದರ ಮಾವನಾಗಿದ್ದರು. ಅವರು ಬದರ್ ಮತ್ತು ಉಹುದ್ ಯುದ್ಧಗಳಲ್ಲಿ ಭಾಗವಹಿಸಿದ್ದರು. ಬಿಅ್‌ರ್ ಮಊನದ ದಿನದಲ್ಲಿ ಅವರು ಶಹೀದರಾದರು. ಹಝ್ರತ್ ಅನಸ್ ಬಿನ್ ಮಾಲಿಕ್ ವರದಿ ಮಾಡುತ್ತಾರೆ: ಬಿಅ್‌ರ್ ಮಊನದ ದಿನದಲ್ಲಿ ಅವರನ್ನು ಈಟಿಯಿಂದ ತಿವಿದಾಗ ಅವರು ತನ್ನ ರಕ್ತವನ್ನು ತನ್ನ ಕೈಯಲ್ಲಿ ಹಿಡಿದುಕೊಂಡು ಮುಖಕ್ಕೆ ಮತ್ತು ತಲೆಗೆ ಸಿಂಪಡಿಸಿದರು. ಅನಂತರ ಹೇಳಿದರು: **ಫುಝ್ತು ಬಿ ರಬ್ಬಿಲ್ ಕಅಬ** – ಕಅಬದ ಪ್ರಭುವಿನಾಣೆ ನಾನು ನನ್ನ ಉದ್ದೇಶಲಕ್ಷ್ಯ ಗಳಿಸಿದೆ.

ಹಝ್ರತ್ ಅನಸ್ ರಝಿಯಲ್ಲಾಹು ತಆಲ ಅನ್‌ಹು ಹೇಳುತ್ತಾರೆ: ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಸಮೀಪಕ್ಕೆ ರಅ್‌ಲ್, ಝಕ್‌ವಾನ್ ಮತ್ತು ಬನೂ ಲಹ್‌ಯಾನ್ ಗೋತ್ರಗಳ ಕೆಲವು ಜನರು ಬಂದು 'ನಾವು ಮುಸ್ಲಿಮರಾಗಿದ್ದೇವೆ.' ಎಂದು ಹೇಳಿದರು. ಅವರು ತಮ್ಮ ಸಮುದಾಯದವರನ್ನು ಎದುರಿಸಲು ಸಹಾಯವನ್ನು ಬೇಡಿದರು. ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಎಪ್ಪತ್ತು ಅನ್‌ಸಾರ್‌ಗಳನ್ನು ಅವರ ಜೊತೆ ಕಳುಹಿಸಿದರು. ನಾವು ಅವರನ್ನು ಖಾರಿಗಳೆಂದು ಕರೆಯುತ್ತಿದ್ದೆವು. ಅವರು ಹಗಲು ಹೊತ್ತಿನಲ್ಲಿ ಸೌದೆ ತರುತ್ತಿದ್ದರು. ರಾತ್ರಿ ನಮಾಝ್ ನಿರ್ವಹಿಸುತ್ತಿದ್ದರು. ಈ ಸಹಾಬರನ್ನು ಕರೆದುಕೊಂಡು ಹೋದವರು ಬಿಅ್‌ರ್ ಮಊನ ತಲಪಿದಾಗ ವಿದ್ರೋಹ ಮಾಡಿ ಆ ಸಹಾಬರನ್ನು ಕೊಂದು ಹಾಕಿದರು. ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಒಂದು ತಿಂಗಳು ಕಾಲ ಅಥವಾ ಇನ್ನೊಂದು ವರದಿ ಪ್ರಕಾರ ನಲ್ವತ್ತು ದಿನಗಳ ಕಾಲ ರಅ್‌ಲ್, ಝಕ್‌ವಾನ್ ಮತ್ತು ಬನೂ ಲಹ್‌ಯಾನ್ ಗೋತ್ರಗಳ ವಿರುದ್ಧ ಪ್ರಾರ್ಥಿಸುತ್ತಿಸುತ್ತಿದ್ದರು. ಆ ಖಾರಿಗಳ ಹತ್ಯೆಯ ಕಾರಣ ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ದುಃಖ ಪ್ರಕಟಿಸಿದ ಹಾಗೆ ಬೇರೆ ಯಾವ ಸಂದರ್ಭದಲ್ಲಿಯೂ ದುಃಖ ಪ್ರಕಟಿಸಿದ್ದನ್ನು ನಾನು ಕಂಡಿಲ್ಲ.

ಈ ಜನರು ಅಲ್ಲಾಹನ ಸಂಪ್ರೀತಿ ಗಳಿಸುವುದು ತಮ್ಮ ಮೂಲ ಉದ್ದೇಶವಾಗಿ ಗಣಿಸಿದ್ದರು. ಲೌಕಿಕ ಜಯಗಳು ಅವರ ಮುಖ್ಯ ಉದ್ದೇಶವಾಗಿರಲಿಲ್ಲ. ಅಲ್ಲಾಹನು ಸಹ ಅವರ ಬಗ್ಗೆ ಪ್ರಕಟಿಸಿದನು: ಅಲ್ಲಾಹನು ಅವರಿಂದ ಸಂಪ್ರೀತನಾದನು ಎಂದು.

ಬಿಅ್‌ರ್ ಮಊನ ಶಹಾದತ್ ಸಂದರ್ಭದಲ್ಲಿ ಸಹಾಬರು ಹೀಗೆ ಪ್ರಾರ್ಥಿಸಿದ್ದರು: **ಅಲ್ಲಾಹುಮ್ಮ ಬಲ್ಲಿಗ್ ಅನ್ನಾ ನಬಿಯ್ಯನಾ ಅನ್ನಾ ಖದ್ ಲಖೀನಾಕ ಫರಿಝೀನಾ ಅನ್‌ಕ ವ ರಝೀತು ಅನ್ನಾ.** ಓ ಅಲ್ಲಾಹ್, ನಮ್ಮ ಪ್ರವಾದಿಯವರಿಗೆ ನಮ್ಮ ಸ್ಥಿತಿಯ ಬಗ್ಗೆ ತಿಳಿಸು – ನಾವು ನಿನ್ನನ್ನು ಸೇರಿದೆವೆಂದು. ನಾವು ನಿನ್ನಿಂದಲೂ ನೀನು ನಮ್ಮಿಂದಲೂ ಸಂಪ್ರೀತಿ ಗಳಿಸಿದೆವು ಎಂದು. ಹಝ್ರತ್ ಅನಸ್ ಹೇಳುತ್ತಾರೆ: ಹಝ್ರತ್ ಜಿಬ್ರೀಲ್ ಅಲೈಹಿಸ್ಸಲಾಮ್, ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಬಳಿಗೆ ಬಂದು ಹೇಳಿದರು: ಆ ಸಹಾಬರು ಅಲ್ಲಾಹನ ಸನ್ನಿಧಿಗೆ ತಲಪಿರುವರು, ಅಲ್ಲಾಹನು ಅವರಿಂದ ಸಂಪ್ರೀತನಾಗಿರುವನು.

ಹಝ್ರತ್ ಮಿರ್ಝಾ ಬಶೀರ್ ಅಹ್ಮದ್ ಸಾಹಿಬರು ಹೀಗೆ ಬರೆದಿದ್ದಾರೆ: ಬಿಅ್‌ರ್ ಮಊನ ಮತ್ತು ರಜೀಅ್ ಸಂಭವಗಳಿಂದ ಅರಬ್ ಗೋತ್ರಗಳು ಇಸ್ಲಾಮಿನ ವಿರುದ್ಧ ಮತ್ತು ಇಸ್ಲಾಮಿನ ಅನುಯಾಯಿಗಳ ವಿರುದ್ಧ ಹೊಂದಿದ್ದ ಅತ್ಯಂತ ಕಟುವಾದ ದ್ವೇಷ ಭಾವನೆಯ ಬಗ್ಗೆ ಸ್ಪಷ್ಟವಾಗಿ ತಿಳಿಯುತ್ತದೆ. ಈ ಘಟನೆಗಳಿಂದ ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರಿಗೆ ಅತೀವ ದುಃಖವಾಗಿತ್ತು. ಆದರೆ ಶತ್ರುಗಳ ವಿರುದ್ಧ ಅವರು ಯುದ್ಧ ಮಾಡಲಿಲ್ಲ. ಅವರಿಗೆ ಆ ಸಮಾಚಾರ ಲಭಿಸಿದ ದಿನದಿಂದ ಮೊದಲುಗೊಂಡು ಮೂವತ್ತು ದಿನಗಳ ಕಾಲ ಪ್ರತಿ ದಿನ ಸುಬ್‌ಹ್ ನಮಾಝ್‌ನಲ್ಲಿ ರುಕೂನಿಂದ ಎದ್ದು ನಿಂತಾಗ ಪ್ರತಿಯೊಂದು ಗೋತ್ರದ ಹೆಸರು ಹೇಳಿ ಅಲ್ಲಾಹನೊಂದಿಗೆ ಅಳುತ್ತಾ ಪ್ರಾರ್ಥಿಸುತ್ತಿದ್ದರು: ಓ ನಮ್ಮ ಪ್ರಭೂ, ನೀನು ನಮ್ಮ ಸ್ಥಿತಿಯ ಬಗ್ಗೆ ಕರುಣೆ ದೋರು. ಇಸ್ಲಾಮಿನ ಶತ್ರುಗಳ ಕೈಗಳನ್ನು ತಡೆದಿರಿಸು. ಅವರು ನಿನ್ನ ಧರ್ಮವನ್ನು ಅಳಿಸಿ ಬಿಡಲು ಇಷ್ಟು ನಿಷ್ಕರುಣೆಯಿಂದಲೂ ಕಠಿಣ ಹೃದಯಿಗಳಾಗಿಯೂ ನಿಷ್ಕಳಂಕ ಮುಸ್ಲಿಮರ ರಕ್ತಪಾತ ಮಾಡುತ್ತಿದ್ದಾರೆ.

ಇಂದಿನ ಕಾಲದಲ್ಲಿ ಸಹ ಶತ್ರುಗಳ ಕೈಗಳನ್ನು ತಡೆಯಲು ಪ್ರಾರ್ಥನೆಗಳ ಮೂಲಕವೇ ಅಲ್ಲಾಹನ ಸಹಾಯ

ಬೇಡಿಕೊಳ್ಳಬೇಕಾಗಿದೆ. ಅಲ್ಲಾಹನೇ ಶತ್ರುಗಳನ್ನು ಹಿಡಿಗೂಡುವ ವ್ಯವಸ್ಥೆ ಮಾಡುವನು. ಮತ್ತು ನಮಗೆ ಸೌಲಭ್ಯಗಳನ್ನು ಒದಗಿಸುವನು.

ಹಝ್ರತ್ ಸಅದ್ ಬಿನ್ ಖೌಲ ಒಬ್ಬ ಸಹಾಬಿಯಾಗಿದ್ದರು. ಅವರು ಆರಂಭಕಾಲದ ಸಹಾಬರಲ್ಲಿ ಒಬ್ಬರಾಗಿದ್ದರು. ಅವರು ಅಬಿಸೀನಿಯಾ ದೇಶಕ್ಕೆ ವಲಸೆ ಹೋದವರಲ್ಲಿ ಸೇರಿದ್ದರು. ಅವರು ಬದರ್ ಯುದ್ಧದಲ್ಲಿ ಭಾಗವಹಿಸಿದಾಗ ಅವರ ಪ್ರಾಯ 25 ಆಗಿತ್ತು. ಅವರು ಬದರ್, ಖಂದಕ್ ಯುದ್ಧಗಳಲ್ಲಿಯೂ ಹುದೈಬಿಯಾ ಸಂಧಿಯಲ್ಲಿಯೂ ಭಾಗವಹಿಸಿದ್ದರು. ಅವರು ಹಝ್ರತ್ ಸುಬೈಅ ಅಸ್‌ಲಮಿಯ್ಯರ ಪತಿಯಾಗಿದ್ದರು. ಅವರು ಹಜ್ಜತುಲ್ ವಿದಾ ಸಂದರ್ಭದಲ್ಲಿ ಮೃತರಾದರು.

ಇನ್ನೊಬ್ಬ ಸಹಾಬಿ ಹಝ್ರತ್ ಅಬುಲ್ ಹೈಸಮ್ ರಝಿಯಲ್ಲಾಹು ಅನ್‌ಹು. ಅವರು ಅಜ್ಞಾನದ ಕಾಲದಲ್ಲಿಯೂ ವಿಗ್ರಹಾರಾಧನೆ ಬಗ್ಗೆ ಬೇಸರ ಹೊಂದಿದ್ದರು ಮತ್ತು ವಿಗ್ರಹಗಳನ್ನು ನಿಂದಿಸುತ್ತಿದ್ದರು. ಕೆಲವರ ಅಭಿಪ್ರಾಯ ಪ್ರಕಾರ ಬೈಅತ್ ಅಖ್‌ಬ ಊಲಾಕ್ಕೆ ಮೊದಲು ಹಝ್ರತ್ ಅಸದ್ ಬಿನ್ ಝುರಾರ ರವರ ಆಹ್ವಾನ ಪ್ರಕಾರ ಮದೀನದಲ್ಲಿ ಅವರು ಇಸ್ಲಾಮಿಗೆ ಸೇರಿದರು. ಬೈಅತ್ ಅಖ್‌ಬ ಊಲಾ ಸಂದರ್ಭದಲ್ಲಿ ಮಕ್ಕಕ್ಕೆ ಹೋದ ಹನ್ನೆರಡು ಜನರ ತಂಡದಲ್ಲಿ ಅವರು ಸೇರಿದ್ದರು. ಮಕ್ಕಕ್ಕೆ ಹೋಗಿ ಅವರು ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಕೈಯಲ್ಲಿ ಬೈಅತ್ ಮಾಡಿದರು. ಸೀರತ್ ಖಾತಮುನ್ನಬಿಯ್ಯೀನ್ ಎಂಬ ಗ್ರಂಥದಲ್ಲಿ ಹಝ್ರತ್ ಮಿರ್ಝಾ ಬಶೀರ್ ಅಹ್ಮದ್ ರಝಿಯಲ್ಲಾಹು ಅನ್‌ಹು ಬರೆಯುತ್ತಾರೆ: ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಮಕ್ಕದ ಹೊರವಲಯದ ಒಂದು ಸ್ಥಳದಲ್ಲಿ ಯಸ್‌ರಿಬ್‌ನಿಂದ ಬಂದವರನ್ನು ಭೇಟಿಯಾದರು. ಅವರು ತಮ್ಮ ನಗರದ ಸ್ಥಿತಿಯ ಬಗ್ಗೆ ತಿಳಿಸಿದರು. ಅವರು ಆಗ ಕ್ರಮಬದ್ಧವಾಗಿ ಬೈಅತ್ ಮಾಡಿದರು. ಈ ಬೈಅತ್ ಮದೀನದಲ್ಲಿ ಇಸ್ಲಾಮ್ ಧರ್ಮ ಸ್ಥಾಪನೆಗೆ ಅಸ್ತಿಭಾರದ ಕಲ್ಲಾಯಿತು. ಬೈಅತ್ ಅಖಬ ಸಾನಿಯದ ಸಂದರ್ಭದಲ್ಲಿ ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಎಪ್ಪತ್ತು ಅನ್‌ಸಾರ್‌ಗಳ ಪೈಕಿ 12 ಜನರನ್ನು ಪ್ರಚಾರಕರನ್ನಾಗಿ ನೇಮಿಸಿದಾಗ ಅವರಲ್ಲಿ ಹಝ್ರತ್ ಅಬೂ ಹೈಸಮ್ ಒಬ್ಬರಾಗಿದ್ದರು. ಒಂದು ವರದಿ ಹೀಗಿದೆ, ಬೈಅತ್ ಸಂದರ್ಭದಲ್ಲಿ ಹಝ್ರತ್ ಅಬೂ ಹೈಸಮ್ ಹೇಳಿದರು: ಓ ಅಲ್ಲಾಹನ ಸಂದೇಶವಾಹಕರೇ, ನೀವು ನಿಮ್ಮ ಊರಿನವರ ಮೇಲೆ ಜಯಗಳಿಸಿದಾಗ ನೀವು ನಮ್ಮನ್ನು ಬಿಟ್ಟು ನಿಮ್ಮ ಊರಿಗೆ ಹೋಗಿ ನಮಗೆ ನೋವನ್ನುಂಟು ಮಾಡಬೇಡಿರಿ. ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಆ ಮಾತನ್ನು ಆಲಿಸಿ ಮುಗುಳು ನಗುತ್ತಾ ಹೇಳಿದರು: ಈಗ ನಿಮ್ಮ ರಕ್ತ ನನ್ನ ರಕ್ತವಾಗಿದೆ. ಈಗ ನಾನು ನಿಮ್ಮಿಂದ ಮತ್ತು ನೀವು ನನ್ನಿಂದ ಆಗಿರುವಿರಿ. ನಿಮ್ಮೊಂದಿಗೆ ಯುದ್ಧ ಮಾಡುವವನು ನನ್ನೊಂದಿಗೆ ಯುದ್ಧ ಮಾಡುತ್ತಾನೆ. ನಿಮ್ಮೊಂದಿಗೆ ರಾಜಿ ಸಂಧಾನ ಮಾಡುವವನು ನನ್ನೊಂದಿಗೆ ರಾಜಿ ಸಂಧಾನ ಮಾಡುತ್ತಾನೆ. ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಮಕ್ಕದಿಂದ ಹಿಜ್‌ರತ್ ಹೋದ ನಂತರ ಹಝ್ರತ್ ಉಸ್ಮಾನ್ ಬಿನ್ ಮಝ್‌ಊನ್ ಮತ್ತು ಹಝ್ರತ್ ಅಬುಲ್ ಹೈಸಮ್ ಅನ್‌ಸಾರಿ ಮಧ್ಯೆ ಸಹೋದರ ಸಂಬಂಧ ಸ್ಥಾಪಿಸಿದ್ದರು.

ಹಝ್ರತ್ ಅಬೂ ಹುರೈರ ಹೇಳುತ್ತಾರೆ: ಒಮ್ಮೆ ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು, ಹಝ್ರತ್ ಅಬೂಬಕರ್(ರ), ಹಝ್ರತ್ ಉಮರ್(ರ), ಈ ಮೂವರು ಹಝ್ರತ್ ಅಬುಲ್ ಹೈಸಮ್ ಅನ್‌ಸಾರಿಯ ಮನೆಗೆ ಹೋದರು. ಹಝ್ರತ್ ಅಬುಲ್ ಹೈಸಮ್ ಆ ಮೂವರನ್ನು ತನ್ನ ತೋಟಕ್ಕೆ ಕರೆದುಕೊಂಡು ಹೋದರು. ಅಲ್ಲಿ ಒಂದು ಚಾದರವನ್ನು ಹಾಸಿದರು. ಅವರು ತೋಟಕ್ಕೆ ಹೋಗಿ ಖರ್ಜೂರದ ಒಂದು ಪೂರ್ಣ ಗೊಂಚಲು ಕತ್ತರಿಸಿ ತಂದರು. ಅದರಲ್ಲಿ ಹಣ್ಣಾದ ಮತ್ತು ಕಾಯಿ ಖರ್ಜೂರವಿತ್ತು. ಆಗ ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಕೇಳಿದರು: ಓ ಅಬುಲ್ ಹೈಸಮ್, ನೀವು ಹಣ್ಣಾದ ಖರ್ಜೂರವನ್ನು ಮಾತ್ರ ಏಕೆ ಕಿತ್ತು ತರಲಿಲ್ಲ. ಆಗ ಅವರು ಹೇಳಿದರು: ಓ ಅಲ್ಲಾಹನ ಸಂದೇಶವಾಹಕರೇ, ನೀವು ನಿಮ್ಮ ಇಷ್ಟ ಪ್ರಕಾರ ಹಣ್ಣಾದ ಖರ್ಜೂರವನ್ನು ಸ್ವತಃ ಆಯ್ಕೆ ಮಾಡಿಕೊಳ್ಳಲಿ ಎಂದು ನಾನು ಉದ್ದೇಶಿಸಿದೆ. ಆಗ ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು, ಹಝ್ರತ್ ಅಬೂಬಕರ್, ಹಝ್ರತ್ ಉಮರ್ ಖರ್ಜೂರ ತಿಂದು ನೀರು ಕುಡಿದರು. ಅನಂತರ ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಹೇಳಿದರು: ಅಲ್ಲಾಹನಾಣೆ ನೀವು ಈ ಅನುಗ್ರಹಗಳ ಬಗ್ಗೆ ಖಿಯಾಮತ್ ದಿನದಂದು ಪ್ರಶ್ನಿಸಲ್ಪಡುವಿರಿ. ಎಂದರೆ ತಂಪು ನೆರಳು, ತಂಪಾದ ನೀರು, ಮತ್ತು ತಾಜಾ ಖರ್ಜೂರ ಅನುಗ್ರಹಗಳಾಗಿವೆ.

ಒಮ್ಮೆ ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಒಬ್ಬ ಯುದ್ಧ ಕೈದಿಯನ್ನು ಹಝ್ರತ್ ಅಬುಲ್ ಹೈಸಮರಿಗೆ ಗುಲಾಮನಾಗಿ ನೀಡಿದಾಗ ಅವರು ಆ ಕೈದಿಯನ್ನು ವಿಮೋಚಿಸಿದರು. ಅವರು ಬದರ್, ಉಹುದ್, ಖಂದಕ್ ಮತ್ತು ಇತರ ಎಲ್ಲಾ ಯುದ್ಧಗಳಲ್ಲಿ ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಜೊತೆ ಸವಾರರಾಗಿದ್ದರು. ಮೌತ ಯುದ್ಧದಲ್ಲಿ ಹಝ್ರತ್ ಅಬ್ದುಲ್ಲಾ ಬಿನ್ ರವಾಹ ಶಹೀದರಾದ ನಂತರ ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಹಝ್ರತ್ ಅಬುಲ್ ಹೈಸಮ್‌ರನ್ನು ಖೈಬರ್ ಪ್ರದೇಶದಲ್ಲಿರುವ ಖರ್ಜೂರದ ಫಸಲಿನ ಅಂದಾಜು ಮಾಡಲು ಕಳುಹಿಸಿದ್ದರು.

ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ನಿಧನ ಹೊಂದಿದ ನಂತರ ಹಝ್ರತ್ ಅಬೂಬಕರ್, ಹಝ್ರತ್ ಅಬುಲ್ ಹೈಸಮ್‌ರನ್ನು ಖರ್ಜೂರದ ಫಸಲಿನ ಅಂದಾಜು ಮಾಡಲು ಕಳುಹಿಸಲು ಇಚ್ಛಿಸಿದಾಗ ಅವರು ಅದಕ್ಕೆ ಸಮ್ಮತಿಸಲಿಲ್ಲ. ಹಝ್ರತ್ ಅಬೂಬಕರ್ ಕಾರಣವೇನೆಂದು ವಿಚಾರಿಸಿದಾಗ ಅವರು ಭಾವಾವೇಶದಿಂದ ಹೇಳಿದರು: ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಕಾಲದಲ್ಲಿ ನಾನು ಖರ್ಜೂರದ ಫಸಲನ್ನು ಅಂದಾಜು ಮಾಡಿ ಮರಳಿ ಬಂದಾಗ

ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ನನಗೋಸ್ಕರ ಪ್ರಾರ್ಥಿಸುತ್ತಿದ್ದರು. ಆಗ ಹಝ್ರತ್ ಅಬೂಬಕರ್(ರ) ಅವರ ಹೃದಯದ ಸ್ಥಿತಿಯನ್ನು ನೋಡಿ ಅವರನ್ನು ಫಸಲು ಅಂದಾಜು ಮಾಡಲು ಕಳುಹಿಸಲಿಲ್ಲ. ಆದರೆ ಹಝ್ರತ್ ಉಮರ್(ರ)ರವರ ಕಾಲದಲ್ಲಿ ಅವರನ್ನು ಖೈಬರಿನ ಜಮೀನುಗಳ ಅಂದಾಜು ಮಾಡಲು ಕಳುಹಿಸಿದಾಗ ಅವರು ಕೂಡಲೇ ಹೋದರು. ಏಕೆಂದರೆ ಆ ಸಮಯದಲ್ಲಿ ಅವರ ಮಾನಸಿಕ ಉದ್ವೇಗ ನಿವಾರಣೆಯಾಗಿತ್ತು.

ಜುಮುಅದ ನಂತರ ನಾನು ಇಬ್ಬರ ನಮಾಝೆ ಜನಾಝ ಗಾಯಿಬ್ ನಿರ್ವಹಿಸುವೆನು. ಒಂದು ಜನಾಝ ಮುಕರ್ರಮ್ ಸಾಹಿಬ್‌ಝಾದ ಮಿರ್ಝಾ ಮಜೀದ್ ಅಹ್ಮದ್ ಸಾಹಿಬರದಾಗಿದೆ. ಅವರು ಹಝ್ರತ್ ಸಾಹಿಬ್‌ಝಾದ ಮಿರ್ಝಾ ಬಶೀರ್ ಅಹ್ಮದ್ ಸಾಹಿಬರ ಪುತ್ರರಾಗಿದ್ದರು. ಅಗಸ್ಟ್ 14ರಂದು 94ನೇ ವಯಸ್ಸಿನಲ್ಲಿ ಅವರು ನಿಧನ ಹೊಂದಿದರು – **ಇನ್ನಾಲಿಲ್ಲಾಹಿ ವಇನ್ನಾ ಇಲೈಹಿ ರಾಜಿಊನ್**. ಅವರು 1924 ಜುಲಾಯಿ 18ರಂದು ಖಾದಿಯಾನ್‌ನಲ್ಲಿ ಜನಿಸಿದರು. ಅವರ ಮಾತೆ ಮುಕರ್ರಮ ಸರ್‌ವರ್ ಸುಲ್ತಾನ ಬೇಗಂ ಸಾಹಿಬರು ಹಝ್ರತ್ ಗುಲಾಮ್ ಹಸನ್ ಸಾಹಿಬ್ ಪೆಶಾವರಿಯವರ ಪುತ್ರಿಯಾಗಿದ್ದರು. ಅವರು 1944 ಮೇ 7ರಂದು ಝಿಂದಗಿ ವಕ್ಫ್ ಮಾಡಿದರು. ಅವರು ವಿದ್ಯಾಭ್ಯಾಸವನ್ನು ಮುಂದುವರಿಸಿದ್ದರು. 1949 ಡಿಸೆಂಬರ್‌ನಲ್ಲಿ ಅವರು ಜಾಮಿಅತುಲ್ ಮುಬಶ್ಶಿರೀನ್‌ಗೆ ಪ್ರವೇಶಿಸಿದರು. 1954ರಲ್ಲಿ ಜಾಮಿಅದಿಂದ ತೇರ್ಗಡೆ ಹೊಂದಿದರು. 1950 ಡಿಸೆಂಬರ್ 28ರಂದು ಜಲ್ಸಾ ಸಾಲಾನದ ತೃತೀಯ ದಿನ ಅವರ ನಿಕಾಹ್ ಸಾಹಿಬ್‌ಝಾದಿ ಖುದ್‌ಸಿಯ್ಯ ಬೇಗಮ್‌ರೊಂದಿಗೆ ಜರಗಿತು. ಸಾಹಿಬ್‌ಝಾದಿ ಖುದ್‌ಸಿಯ್ಯ ಬೇಗಮ್ ಹಝ್ರತ್ ನವಾಬ್ ಅಬ್ದುಲ್ಲಾ ಖಾನ್ ಸಾಹಿಬ್ ಮತ್ತು ಹಝ್ರತ್ ನವಾಬ್ ಅಮತುಲ್ ಹಫೀಝ್ ಬೇಗಮ್ ಸಾಹಿಬರ ಪುತ್ರಿಯಾಗಿದ್ದರು. ಅವರ ನಿಕಾಹ್ ಖುತ್‌ಬ ಹಝ್ರತ್ ಖಲೀಫತುಲ್ ಮಸೀಹ್ ಸಾನಿ ನಿರ್ವಹಿಸಿದ್ದರು. ಅವರು ಅಲ್‌ಫಝ್ಲ್ ಪತ್ರಿಕೆಯಲ್ಲಿ ಲೇಖನಗಳನ್ನು ಪ್ರಕಟಿಸುತ್ತಿದ್ದರು. ಅವರು ಜ್ಞಾನ ಸಂಪನ್ನರಾಗಿದ್ದರು. ಅವರ ಲೇಖನಗಳು 'ನುಕ್ತ ನಝರ್' ಎಂಬ ಶೀರ್ಷಿಕೆಯಲ್ಲಿ ಪುಸ್ತಕವಾಗಿ ಪ್ರಕಟಿಸಲಾಗಿದೆ. ಅವರಿಗೆ ಲೇಖನ ಬರೆಯುವ ಬಹಳ ಅಭಿರುಚಿ ಇತ್ತು. ಅವರು ಲೈಬ್ರರಿಯಲ್ಲಿ ಓದುತ್ತಾ ಕುಳಿತಿರುವುದನ್ನು ನಾನು ಸಹ ನೋಡಿದ್ದೇನೆ. ಅವರ ಸೊಸೆ, ಮಿರ್ಝಾ ಗುಲಾಮ್ ಖಾದಿರ್ ಸಾಹಿಬ್ ಶಹೀದರ ವಿಧವೆ, ಅಮತುನ್ನಾಸಿರ್ ಬರೆಯುತ್ತಾರೆ: ಅವರು ಬಹಳ ಪ್ರೀತಿ ವಾತ್ಸಲ್ಯ ಭರಿತ ಸದ್ಗುಣ ಸಂಪನ್ನರಾಗಿದ್ದರು. ಅವರು ನಿಷ್ಠಾವಂತರೂ ವಿಶಾಲ ಹೃದಯಿಯೂ ಆಗಿದ್ದರು. ಅವರು ತಮ್ಮ ಪುತ್ರ ಗುಲಾಮ್ ಖಾದಿರ್ ಸಾಹಿಬ್ ಶಹೀದರಾದಾಗ ಬಹಳ ಸಹನೆದೋರುವ ಉದಾಹರಣೆ ತೋರಿಸಿದರು. ಅಲ್ಲಾಹನು ಅವರಿಗೆ ಮಗ್‌ಫಿರತ್ ನೀಡಲಿ ಮತ್ತು ಕರುಣೆದೋರಲಿ. ಅವರ ಮಕ್ಕಳಿಗೆ ಸಹ ಅವರ ಒಳಿತುಗಳನ್ನು ಜಾರಿಗೊಳಿಸುವ ಭಾಗ್ಯ ಲಭಿಸಲಿ. ಅವರು ಯಾವಾಗಲೂ ಖಿಲಾಫತ್‌ನೊಂದಿಗೆ ಮತ್ತು ಜಮಾಅತ್‌ನೊಂದಿಗೆ ಸಂಬಂಧ ಸ್ಥಾಪಿಸುವವರಾಗಲಿ.

ಮತ್ತೊಂದು ಜನಾಝ ಮುಕರ್ರಮ ಸಯ್ಯಿದ ನಸೀಮ್ ಅಖ್ತರ್ ಸಾಹಿಬರದಾಗಿದೆ. ಅವರು ಮುಹಮ್ಮದ್ ಯೂಸುಫ್ ಸಾಹಿಬರ ಪತ್ನಿಯಾಗಿದ್ದರು. ಅವರು 2018 ಜುಲಾಯಿ 27ರಂದು ನಿಧನ ಹೊಂದಿದರು – **ಇನ್ನಾಲಿಲ್ಲಾಹಿ ವಇನ್ನಾ ಇಲೈಹಿ ರಾಜಿಊನ್**. ಅವರು ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರ ಸಹಾಬಿ ಹಝ್ರತ್ ವಲೀ ಮುಹಮ್ಮದ್ ಸಾಹಿಬರ ಮೊಮ್ಮಗಳೂ ಖಾಝೀ ದೀನ್ ಮುಹಮ್ಮದ್ ಸಾಹಿಬರ ಪುತ್ರಿಯೂ ಆಗಿದ್ದರು. ಅಲ್ಲಾಹನು ಅವರ ಆಧ್ಯಾತ್ಮಿಕ ಪದವಿಯನ್ನು ಉನ್ನತಗೊಳಿಸಲಿ. ಅವರ ಒಳಿತುಗಳನ್ನು ಅವರ ಸಂತಾನಗಳಲ್ಲಿ ಜಾರಿಗೊಳಿಸುವವನಾಗಲಿ – ಆಮೀನ್.

*****


***Friday Sermon delivered by Hadrath Khaleefatul Masih Al Khamis*** *(atba)*

*At Masjid Baithul Futhuh, London. On 17-08-2018.*

**Summarized by** *Majlis Ansarullah Bharat*

***Kannada Translation:*** M. Ubeidullah for Kannada Desk, Qadian

***Reviewed by:*** M.P Ibrahim | ***Typing:*** U Basheer Ahmad

***Published By:*** Kannada Isha'at Team for Nazarath Nashr-O-Isha'ath, Qadian

***Email***: *khutuba.kannada@gmail.com*

**You can find all the Sermons archived at**: www.alislam.org/friday-sermon